# ST FRANCIS DE SALES COLLEGE

Permanently Affiliated to Bangalore University || AICTE Approved Electronic City, Bengaluru - 100

Accredited by NAAC with 'A' Grade || Recognised under section 2(f) & 12(b) of the UGC Act || An ISO 9001: 2015 Certified Institution

## A FRANSALIAN INSTITUTE OF HIGHER LEARNING

### REPORT OF SKILL DEVELOPMENT PROGRAMME

| | |
|---|---|
| ಶೀರ್ಷಿಕೆ | ಕನ್ನಡ ಮತ್ತು ಅಂತರ್ಜಾಲ ಹಾಗೂ ನುಡಿ ತಂತ್ರಾಂಶ |
| ದಿನಾಂಕ | **28.01.2021** |
| ಸಮಯ | **1.00pm** |
| ವಿಭಾಗ ಮತ್ತು ಅಸೋಸಿಯೇಷನ್ | ಕನ್ನಡ ವಿಭಾಗ, ಕನ್ನಡ ಸಂಘ |
| ವೇದಿಕೆ | **Online/ Google meet** https://youtu.be/Xd5BChn2 |
| ಭಾಗವಹಿಸಿದವರು | ತೃತೀಯ ಸೆಮಿಸ್ಟರ್ ನ ಎಲ್ಲಾ ವಿದ್ಯಾರ್ಥಿಗಳು |

| | |
|---|---|
| ಸಂಪನ್ಮೂಲ ವ್ಯಕ್ತಿ ಮತ್ತು ವಿದ್ಯಾರ್ಹತೆ | ಪ್ರೊ. ವೀಣಾ. ಎಂ.ಎ, ಎನ್.ಇ.ಟಿ.<br>ಪ್ರೊ. ಕುಮಾರ ಸಿ. ಎಂ.ಎ, ಎನ್.ಇ.ಟಿ. |
| ಪುಸ್ತಕಗಳು (ಪ್ರಕಟಣೆಗೊಂಡಿದ್ದಲ್ಲಿ) | ಇಲ್ಲ |

## ವರದಿ

ದಿನಾಂಕ 28-1-2021 ರಂದು 'ಕನ್ನಡ ವಿಭಾಗ ಮತ್ತು DSDC' ಸಹಯೋಗದೊಂದಿಗೆ, "ಕನ್ನಡ ಮತ್ತು ಅಂತರ್ಜಾಲ ಹಾಗೂ ನುಡಿ ತಂತ್ರಾಂಶ" ಎಂಬ ವಿಷಯವನ್ನು ಕುರಿತು ಕೌಶಲಾಭಿವೃದ್ಧಿ ಕಾರ್ಯಗಾರವನ್ನು ಏರ್ಪಡಿಸಲಾಗಿತ್ತು.

ಮೂರನೇ ಸೆಮಿಸ್ಟರ್ ನ ಎಲ್ಲಾ ವಿದ್ಯಾರ್ಥಿಗಳು ಹಾಜರಿದ್ದು ಈ ಕೆಳಕಂಡ ವಿಷಯಗಳನ್ನು ಕುರಿತು ಚರ್ಚಿಸಲಾಯಿತು.

- ಭಾಷೆ ಇತಿಹಾಸ
- ಜಾಗತೀಕರಣದ ಅಬ್ಬರ
- ಭಾಷೆ ಮತ್ತು ತಂತ್ರಜ್ಞಾನ
- ಅಂತರ್ಜಾಲ ಪದದ ಉಗಮ
- ಅಂತರ್ಜಾಲದ ಉಪಯೋಗ
- ಕನ್ನಡ ನುಡಿ ಲಿಪಿ ತಂತ್ರಾಂಶ
- ಕೀಲಿಮಣೆ ವಿನ್ಯಾಸ

ದಿನಾಂಕ 28-1-2021 ರಂದು 'ಕನ್ನಡ ವಿಭಾಗ ಮತ್ತು DSDC' ಸಹಯೋಗದೊಂದಿಗೆ, "ಕನ್ನಡ ಮತ್ತು ಅಂತರ್ಜಾಲ ಹಾಗೂ ನುಡಿ ತಂತ್ರಾಂಶ" ಎಂಬ ವಿಷಯವನ್ನು ಕುರಿತು ಕೌಶಲಾಭಿವೃದ್ಧಿ ಕಾರ್ಯಗಾರವನ್ನು ಏರ್ಪಡಿಸಲಾಗಿತ್ತು. ಆನ್ಲೈನ್ ವೇದಿಕೆಯ ಮೂಲಕ ನಡೆದ ಈ ಕಾರ್ಯಗಾರದಲ್ಲಿ ಮೂರನೇ ಸೆಮಿಸ್ಟರ್ ನ ಎಲ್ಲಾ ವಿದ್ಯಾರ್ಥಿಗಳು ಹಾಜರಿದ್ದು ಒಂದಷ್ಟು ಮಾಹಿತಿಯನ್ನು ಪಡೆದುಕೊಳ್ಳುವಲ್ಲಿ

ಯಶಸ್ವಿಯಾದರು. ಮೊದಲಿಗೆ ಸಂತ ಫ್ರಾನ್ಸಿಸ್ ಡಿಸಾಲೇಸ್ ಕಾಲೇಜಿನ ಕನ್ನಡ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ವೀಣಾ ರವರು ಕನ್ನಡ ಮತ್ತು ಅಂತರ್ಜಾಲ ಎಂಬ ವಿಚಾರವನ್ನು ಕುರಿತು ಮಾಹಿತಿಯನ್ನು ನೀಡಿದರು. ದೈತ್ಯಾಕಾರದಲ್ಲಿ ಬೆಳೆಯುತ್ತಿರುವ ತಂತ್ರಜ್ಞಾನ ಯುಗದಲ್ಲಿ ಕನ್ನಡಕ್ಕೆ ಕಂಪ್ಯೂಟರ್ ಹಾಗೂ ಅಂತರ್ಜಾಲದ ಅವಶ್ಯಕತೆ ಮತ್ತು ಅನಿವಾರ್ಯತೆಗಳನ್ನು ಕುರಿತು ಚರ್ಚಿಸಿದರು. ಭಾಷೆಯ ಇತಿಹಾಸದೊಂದಿಗೆ ಪ್ರಾರಂಭಿಸಿ ಪ್ರಾಚೀನ ಸಾಹಿತ್ಯವನ್ನು ಮೆಲುಕುಹಾಕುತ್ತಾ, ಆಧುನಿಕ ಕಾಲಘಟ್ಟದೊಂದಿಗೆ ಮುಖಾಮುಖಿ ಮಾಡುತ್ತಾ "ಆಡು ಮುಟ್ಟದ ಸೊಪ್ಪಿಲ್ಲ ತಂತ್ರಜ್ಞಾನ ಬಳಕೆಯಾಗದ ಕ್ಷೇತ್ರವಿಲ್ಲ" ಎಂಬ ವಿಚಾರವನ್ನು ಮಂಡಿಸಿದರು. ಮುಂದುವರೆದು ಜಾಗತೀಕರಣದ ಅಬ್ಬರ, ಭಾಷೆ ಮತ್ತು ತಂತ್ರಜ್ಞಾನ, ಅಂತರ್ಜಾಲ ಪದದ ಉಗಮ, ಅಂತರ್ಜಾಲದ ಉಪಯೋಗಗಳನ್ನು ಚರ್ಚಿಸುತ್ತಾ ಕನ್ನಡಕ್ಕೆ ಹೇಗೆ ಕಂಠ್ಯ, ತಾಳೆಗರೆ ಬಳಪ, ಕಪ್ಪು, ಕಾಗದ, ಲೇಖನಿಯ ಅವಶ್ಯಕತೆ ಇದೆಯೋ, ಅದೇ ರೀತಿ ಕನ್ನಡಕ್ಕೆ ಕಂಪ್ಯೂಟರ್ ಅನಿವಾರ್ಯವಾಗಿದೆ ಎಂಬುದಾಗಿ ತಿಳಿಸಿದರು.

ಕೌಶಲ್ಯಾಭಿವೃದ್ಧಿ ಕಾರ್ಯಾಗಾರದ ದ್ವಿತೀಯಾರ್ಧದಲ್ಲಿ ಮಾತನಾಡಿದ ಕನ್ನಡ ವಿಭಾಗದ ಸಹ ಪ್ರಾಧ್ಯಾಪಕರಾದ ಪ್ರೊ ಕುಮಾರರವರು ಕನ್ನಡ ನುಡಿ ಲಿಪಿ ತಂತ್ರಾಂಶದ ಪರಿಚಯವನ್ನು ಮಾಡಿಕೊಟ್ಟರು. ತದನಂತರ ನುಡಿ ತಂತ್ರಾಂಶವಿರುವ ಅಂತರ್ಜಾಲ ವಿಳಾಸದ ಬಗ್ಗೆ, ಅದನ್ನು ನಮ್ಮ ಕಂಪ್ಯೂಟರ್ ನಲ್ಲಿ ಪ್ರತಿಷ್ಠಾಪಿಸಿ ಬಳಸುವುದರ ಬಗ್ಗೆ ಪ್ರಯೋಗಾತ್ಮಕವಾಗಿ ವಿವರಿಸಿದರು. ನುಡಿ ತಂತ್ರಾಂಶದ ಪ್ರತಿಷ್ಠಾಪನೆ, ಅದನ್ನ ಕಂಪ್ಯೂಟರ್ ಪರದೆ ಮೇಲೆ ತೆರೆಯುವ ಮಾಹಿತಿಯ ಜೊತೆಗೆ ನುಡಿ ತಂತ್ರಾಂಶದ ಟೂಲ್ ಬಾರ್ ಹಾಗೂ ಕೀಲಿಮಣೆ ವಿನ್ಯಾಸವನ್ನು ಕುರಿತಂತೆ ವಿವರಿಸಿದರು. ನಂತರ ಕಂಪ್ಯೂಟರ್ ಪರದೆಯ ಮೇಲೆ ಕನ್ನಡ ವರ್ಣಮಾಲೆ, ಗುಣಿತಾಕ್ಷರ, ಸರಳ ಪದಗಳು, ಒತ್ತಕ್ಷರದ ಪದಗಳು, ದ್ವಿತ್ವಾಕ್ಷರಗಳು, ವಾಕ್ಯಗಳು ಮುಂತಾದವುಗಳನ್ನು ಮೂಡಿಸುವ ಹಾಗೂ ಅಚ್ಚುಕಟ್ಟಾಗಿ ಜೋಡಿಸುವ ಕುರಿತು ವಿವರಣೆ ನೀಡಿದರು. ಅಷ್ಟೇ ಅಲ್ಲದೆ ನುಡಿ ತಂತ್ರಾಂಶವನ್ನು ಬಳಸಿಕೊಂಡು ಮೈಕ್ರೊಸಾಫ್ಟ್ ವರ್ಡ್ ಪರದೆಯ ಮೇಲೆ ಕನ್ನಡ ಅಕ್ಷರಗಳನ್ನು ಮೂಡಿಸುವ ಬಗ್ಗೆ, ಅಲ್ಲಿರುವ ಕನ್ನಡ ಅಕ್ಷರಗಳನ್ನು ವಿವಿಧ ಶೈಲಿಯಲ್ಲಿ ಬಳಸುವ ಬಗ್ಗೆ, ಅವುಗಳನ್ನು ದಪ್ಪಕ್ಷರ, ಸಣ್ಣಕ್ಷರ, ಓರೆ ಅಕ್ಷರಗಳಾಗಿ ಮಾಡುವುದರ ಬಗ್ಗೆ, ಅಕ್ಷರ ಗಾತ್ರವನ್ನು ಹಿಗ್ಗಿಸುವ, ಕುಗ್ಗಿಸುವ ಬಗ್ಗೆ, ಎಡ-ಬಲ-ಮಧ್ಯದ ಅಲೈನ್ ಮೆಂಟ್ ಗಳನ್ನು ಜೋಡಿಸುವ ಬಗ್ಗೆ, ಪ್ರತಿ ಅಂಶಗಳಿಗೆ ಕ್ರಮಸಂಖ್ಯೆ ಅಥವಾ ಚಿಹ್ನೆಗಳನ್ನು ಜೋಡಿಸುವ ಬಗ್ಗೆ, ನುಡಿ ಲಿಪಿಯಲ್ಲಿ ಮುದ್ರಿಸಿರುವ ದಾಖಲೆಯನ್ನು ಕಂಪ್ಯೂಟರ್ ನಲ್ಲಿ ಉಳಿಸುವ ಬಗ್ಗೆ ವಿವರಣೆ ನೀಡಿದರು. ಕನ್ನಡ ಬರಹವನ್ನು ಕಂಪ್ಯೂಟರ್‌ನಲ್ಲಿ ಮೂಡಿಸುವಂತಹ ಪ್ರಯತ್ನದಲ್ಲಿ ನುಡಿ ತಂತ್ರಾಂಶದ ಅಗತ್ಯತೆಯನ್ನು ಮತ್ತು ವಿಶೇಷತೆಯನ್ನು ಕುರಿತ ಈ ವಿವರಣೆ ವಿದ್ಯಾರ್ಥಿಗಳಿಗೆ ಪ್ರಯೋಜನಕಾರಿಯಾಯಿತು.

ಒಟ್ಟಾರೆಯಾಗಿ ಅಂತರ್ಜಾಲ ತರಗತಿಯ ಮೂಲಕ ನಡೆದ ಈ ಕಾರ್ಯಾಗಾರವು ಕನ್ನಡ ಮತ್ತು ಅಂತರ್ಜಾಲ ಹಾಗೂ ಕನ್ನಡ ಮತ್ತು ನುಡಿ ತಂತ್ರಾಂಶವನ್ನು ಕುರಿತಂತೆ ಅಗತ್ಯವಾದ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಸುವಲ್ಲಿ ವಿದ್ಯಾರ್ಥಿಗಳು ಅದರ ಸದುಪಯೊಗವನ್ನು ಪಡೆಯುವಲ್ಲಿ ಯಶಸ್ವಿಯಾಯಿತು.

ಕಾರ್ಯಕ್ರಮಕ್ಕೆ ಸಂಬಂಧ ಪಟ್ಟಂತಹ ಲಿಂಕ್ ಗಳು ಈ ಕೆಳಗಿನಂತಿದೆ·


-ವಿಡಿಯೋ: https://youtu.be/Xd5BChn20Ns


ಪಿಪಿಟಿಬಳಕೆ:https://drive.google.com/file/d/1p_aI_cQ9gCWOENhYYpUJnDA3r6qpws4Q/view?usp=sharing


PRINCIPAL
St. Francis de Sales College
Electronics City Post, Bangalore - 560 100.

COORDINATOR
Desalite Skill Development Cell
St. Francis de Sales College
Bengaluru - 560100

**PHOTOS OF THE EVENT**



COORDINATOR
Desalite Skill Development Cell
St. Francis de Sales College
Bengaluru - 560100

PRINCIPAL
St. Francis de Sales College
Electronics City Post, Bangalore - 560 100.